# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆಃ 391/2021

**ಸಾಕ್ಷಿಯನ್ನು ದಿಃ 23.05.2023 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | | |
|---|---|---|---|
| ಹೆಸರು | ಮಂಜುಳ | ಸಿ.ಡಬ್ಲ್ಯೂಃ 2 | ಪಿ.ಡಬ್ಲ್ಯೂಃ 1 |
| ಗಂಡನ ಹೆಸರು | ಮಹದೇವ | | |
| ವಯಸ್ಸು | 45 ವರ್ಷ | | |
| ಕೆಲಸ | ಕೂಲಿ | | |
| ವಾಸಸ್ಥಳ | ಹುಣಸೂರು | | |

## ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ

ಚಾಸಾ–1 ನನ್ನ ಮೈದ. 2020 ರಲ್ಲಿ ಸಂಜೆ 6.00 ಗಂಟೆ ಸಮಯದಲ್ಲಿ ನಮ್ಮ ಮನೆಯ ಮೇಲಿರುವ ಪೈಪಿನಿಂದ ಹೊಗೆ ಬರುತ್ತಿದೆ ಎಂದು 1 ಮತ್ತು 2 ನೇ ಆರೋಪಿತರು ನಮ್ಮ ಮನೆ ಓನರ್ ಚಾಸಾ–4 ರವರಿಗೆ ಹೋಗಿ ತಿಳಿಸಿದ್ದು, ನಮ್ಮ ಮನೆ ಓನರ್ ಬಂದು ಪೈಪನ್ನು ಅಳವಡಿಸಿಕೊಟ್ಟರು. ಆದರೂ ಕೂಡ ಹೊಗೆ ಬರುತ್ತಿದೆ ಎಂದು ಹೇಳಿ 2 ವರ್ಷಗಳ ಹಿಂದೆ ಆರೋಪಿತರು ಬಂದು ನನ್ನನ್ನು ಕೇಳಿದರು. ನಂತರ ಈ ವಿಚಾರವಾಗಿ ಆರೋಪಿತರು ನಮ್ಮನ್ನು ಬೈಯುತ್ತಿದ್ದರು. ನಾನು ಕೂಡ ಬೈಯುತ್ತಿದ್ದೆ. ಆ ಸಮಯ ಚಾಸಾ–1 ರವರು ಸ್ಥಳಕ್ಕೆ ಬಂದು ಹೋಗೋ ಹೊಗೆಯನ್ನು ನಾವು ಹಿಡಿದುಕೊಳ್ಳಲು ಆಗುತ್ತದಾ ಎಂದು ಕೇಳಿದರು ಆಗ 2 ನೇ ಆರೋಪಿ ದೀಪಿಕಾ ತನ್ನ ಗಂಡನಿಗೆ ಕರೆ ಮಾಡಿ ಬರಲು ಹೇಳಿದ್ದು, ಆ ಸಮಯ 2 ನೇ ಆರೋಪಿ ದೀಪಿಕಾ ಅವರ ಗಂಡ ತನ್ನ ಜೊತೆ 3 ಜನ ಹುಡುಗರನ್ನು ಕರೆದುಕೊಂಡು ಬಂದರು.

ಆ ಸವಯ ಚಾಸಾ–1 ರವರು ಸ್ನಾನಕ್ಕೆ ಹೋಗಿದ್ದರು. 2 ನೇ ಆರೋಪಿ ದೀಪಿಕಾ ಅವರ ಗಂಡ ಹೊರಗೆ ನಿಂತುಕೊಂಡಿದ್ದು ಅವರ ಜೊತೆ ಕರೆದುಕೊಂಡು ಬಂದ 3 ಜನ ಹುಡುಗರ ಪೈಕಿ ಒಬ್ಬರು ನಾನು ಪೊಲೀಸ್ ಬಾರೋ ಮಗನೆ ಎಂದು ಹೇಳಿ ಚಾಸಾ–1 ರವರನ್ನು ಸ್ನಾನದ ಮನೆಯಿಂದ ಎಳೆದುಕೊಂಡು ಬಂದರು. ಆಗ ಸದರಿ 3 ಜನ ಹುಡುಗರು ಹಾಗೂ 2 ನೇ ಆರೋಪಿ ದೀಪಿಕಾ ಅವರ ಗಂಡ ಚಾಸಾ–1 ರವರ ಕತ್ತಿನ ಪಟ್ಟಿ ಹಿಡಿದು 3 ಜನ ಹುಡುಗರ ಪೈಕಿ ತಾನು ಪೊಲೀಸ್ ಎಂದು ಹೇಳಿಕೊಂಡಿದ್ದ ವ್ಯಕ್ತಿ ಚಾಸಾ–1 ರವರ ಬಲಹಣೆಗೆ ಡಿಚ್ಚಿ ಹೊಡೆದರು. ಅವರ ಜೊತೆ ಇದ್ದ ಇನ್ನೊಬ್ಬರು ಚಾಸಾ–1 ರವರ ಬಲಪಕ್ಕೆಗೆ ಹೊಡೆದರು. ಇನ್ನೊಬ್ಬ ಹುಡುಗ ಚಾಸಾ–1 ರವರು ನೆಲಕ್ಕೆ ಬಿದ್ದಾಗ ಬಲಗಡೆ ರಟ್ಟೆಗೆ ದೊಣ್ಣೆಯಿಂದ ಹೊಡೆದರು. ಜಗಳ ಬಿಡಿಸಲು ಹೋದ ನನಗೆ 1 ನೇ ಆರೋಪಿ ಲಕ್ಷ್ಮಿ ಹಾಗೂ 2 ನೇ ಆರೋಪಿ ನನ್ನ ಕರಿಮಣಿ ಸರ ಹಿಡಿದು ಕಿತ್ತು ಹಾಕಿದರು. ನಂತರ ನಾವು ಚಿಕಿತ್ಸೆಗಾಗಿ ಹುಣಸೂರು ಸರಕಾರಿ

ಆಸ್ಪತ್ರೆಗೆ ಹೋದೇವು. ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿತರೆ ನನಗೆ ಆ ದಿನ ಬೈದು ಚಾಸಾ–1 ರವರಿಗೆ ಹಲ್ಲೆ ಮಾಡಿರುತ್ತಾರೆ.

ನ್ಯಾಯಾಲಯದ ಮುಂದಿರುವ ದೊಣ್ಣೆ , ರಿಪೀಸ್ ಪಟ್ಟಿ ಮತ್ತು ಷರ್ಟ್ ಅನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಸದರಿ ದೊಣ್ಣೆಯನ್ನು ಮು.ಮಾ–1 ಎಂದು ರಿಪೀಸ್ ಪಟ್ಟಿ ಮು.ಮಾ–2 ಎಂದು, ನೀಲಿ ಮತ್ತು ಬಿಳಿ ಬಣ್ಣದ ಚೆಕ್ಸ್ ತುಂಬುದೋಳಿನ ಷರ್ಟ್ ಅನ್ನು ಮು.ಮಾ–3 ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ. ದಾಖಲೆ ಸ್ಥಳ ಮಹಜರ್ ಆಗಿದ್ದು ಅದನ್ನು ನಿಪಿ.1 ಎಂದು ಸಾಕ್ಷಿಯ ಸಹಿಯನ್ನು ನಿಪಿ.1 ಎ ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಗಲಾಟೆ ಆದ ಅದೇ ದಿನ ಅಥವಾ ಮಾರನೆ ದಿನ ಇರಬಹುದು. ಪೊಲೀಸರು ಸ್ಥಳಕ್ಕೆ ಬಂದಿದ್ದು ಅಕ್ಕ ಪಕ್ಕದವರು ಸ್ಥಳ ತೋರಿಸಿದ ಮೇರೆಗೆ ಬರವಣಿಗೆ ಮಾಡಿಕೊಂಡಿರುತ್ತಾರೆ. ನಿಪಿ.1 ರ ವಿವರಗಳು ನನಗೆ ಗೊತ್ತಿಲ್ಲ. ನಿಪಿ.1 ಕ್ಕೆ ನಾನು ಆಸ್ಪತ್ರೆಯಲ್ಲಿ ಇದ್ದಾಗ ಪೊಲೀಸರು ನನ್ನ ಸಹಿ ಪಡೆದಿರುತ್ತಾರೆ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಮಾನ್ಯ ಸಅಅ ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು)**

**ಪಾಟೀಸವಾಲುಃ ಮಾನ್ಯ ಸಸಅ ರವರಿಂದಃ**

ದಿಃ 29.12.2020 ರಂದು ಪೊಲೀಸರು ಚಾಸಾ–1 ರವರ ಮನೆಗೆ ಬಂದು ನಾನು ಸ್ಥಳ ತೋರಿಸಿದ ಮೇರೆಗೆ ಪೊಲೀಸರು ಸಂಜೆ 5–6 ರವರೆಗೆ ಮಹಜರ್ ಕ್ರಮ ಜರುಗಿಸಿ ಮು.ಮಾ–1 ರಿಂದ 3 ಅನ್ನು ವಶಪಡಿಸಿಕೊಂಡು ನನ್ನ ಹಾಗೂ ಚಾಸಾ–5,6 ರವರ ಸಹಿ ಪಡೆದರು ಎಂದರೆ ಸಾಕ್ಷಿಯು ನಾನು ಆಸ್ಪತ್ರೆಯಲ್ಲಿ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ.

**ಪಾಟೀಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಬಿ ಜೆ ಎಸ್ ಅವರಿಂದ –**

ಘಟನೆ ನಡೆದ ದಿನಾಂಕ ನೆನಪಿಲ್ಲ. ಘಟನಾ ಸಮಯ 3 ಜನ ಹುಡುಗರು ಬಂದಿದ್ದರು ಎಂದು ಹೇಳಿದ್ದು ಅವರ ಹೆಸರು ನನಗೆ ಗೊತ್ತಿಲ್ಲ. ಎರಡು ವರ್ಷಗಳ ಹಿಂದೆ 1 ಮತ್ತು 2 ನೇ ಆರೋಪಿತರು ನನಗೆ ಬೈಯುತ್ತಿದ್ದರು ಎಂದು ನಾನು ಯಾವುದೇ ದೂರು ನೀಡಿಲ್ಲ. ನನ್ನ ಮನೆಯ ಅಕ್ಕಪಕ್ಕ ವಾಸದ ಮನೆಗಳು ಇವೆ ಎಂದರೆ ಸರಿ. ಗಲಾಟೆ ಆಗಿ ಕೂಗಾಡಿದರೆ ಅವರೆಲ್ಲಾ ಓಡಿ ಬರುತ್ತಾರೆ ಎಂದರೆ ಸರಿ. ಗಲಾಟೆ ಆದ

ಸಮಯ ಯಾರು ಉಪಸ್ಥಿತರಿದ್ದರು ಎಂಬ ಪ್ರಶ್ನೆಗೆ ನಾನು ಗಲಾಟೆ ಬಿಡಿಸುವುದರಲ್ಲಿದ್ದೆ, ಯಾರು ಬಂದಿದ್ದರು ಎಂದು ಗಮನಿಸಲಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. 2 ನೇ ಆರೋಪಿ ತನ್ನ ಮನೆಗೆ ಬಂದಾಗ ನಾನು ನೀರು ಬಿಸಿ ಮಾಡಲು ಓಲೆ ಉರಿ ಹಾಕಿದಾಗ ನಮ್ಮನ್ನು ಬೈಯುತ್ತಿದ್ದರು. ನಮ್ಮ ಓಲೆಯಲ್ಲಿ ಹೊಗೆ ಬರುತ್ತದೆ ಎಂದು ಆರೋಪಿತರು ನಮಗೆ 2-3 ಬಾರಿ ಬಂದು ಹೇಳಿದ್ದರು ಎಂದರೆ ಸರಿ. ಆರೋಪಿತರು ನನಗೆ ಹೊಸ ಪೈಪು ಕೊಡಿಸಿ ಹೊಗೆ ತಮ್ಮ ಮನೆ ಕಡೆ ಬಿಡಬೇಡಿ ಎಂದು ಹೇಳಿದ್ದರು ಎಂದರೆ ಸರಿಯಲ್ಲ. 2 ನೇ ಆರೋಪಿ ಫೋನ್ ಮಾಡಿದ ನಂತರ ಅವರ ಗಂಡ ಬಂದಿದ್ದರು. ಆಗ ಸಮಯ ನನಗೆ ಗೊತ್ತಿಲ್ಲ. ಆ ಸಮಯ 2 ನೇ ಆರೋಪಿ  ಫೋನ್ ಮಾಡಿದಾಗಅವರ ಗಂಡ ಮಾತ್ರ ಬಂದಿದ್ದರು. ನಂತರ 2 ನೇ ಆರೋಪಿ ಗಂಡ ಫೋನ್ ಮಾಡಿ 3 ಹುಡುಗರನ್ನು ಕರೆಯಿಸಿಕೊಂಡರು. 2 ನೇ ಆರೋಪಿ ಗಂಡನ ಹೆಸರು ನನಗೆ ಗೊತ್ತಿಲ್ಲ. 2 ನೇ ಆರೋಪಿ ಗಂಡನ ಹೆಸರು ಮಂಜುನಾಥ ಎಂದು ನಾನು ಪೊಲೀಸರ ಮುಂದೆ ಹೇಳಿಕೆ ನೀಡಿಲ್ಲ ಎಂದರೆ ಸರಿ. ನಾನು ಕೇವಲ ದೀಪಿಕಾಳ ಗಂಡ ಎಂದು ಹೇಳಿದ್ದೆ.

ನಮ್ಮ ಮನೆಯಿಂದ ಹೊಗೆ ಬರುತ್ತದೆ ಎಂದು ಆರೋಪಿತರು ನಮ್ಮ ವಾರ್ಡ್ ಹಾಗೂ ಪುರಸಭೆಗೆ ದೂರು ನೀಡಿದ್ದರು ಎಂದರೆ ಸರಿ. ಆದ್ದರಿಂದ ನಾನು ಆರೋಪಿತರ ವಿರುದ್ಧ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ಘಟನೆ ನಡೆದಾಗ ಚಾಸಾ-1 ರವರು ಮು.ಮಾ-3 ಷರ್ಟ್ ಧರಿಸಿದ್ದರು. ಯಾರು ದೊಣ್ಣೆಯಿಂದ ಹಾಗೂ ರಿಪೀಸ್ ಪಟ್ಟಿಯಿಂದ ಹೊಡೆದಿರುತ್ತಾರೆ ನನಗೆ ಗೊತ್ತಿಲ್ಲ. ಒಟ್ಟಿನಲ್ಲಿ  ಹೊಡೆದರು. ಯಾವುದೇ ಗಲಾಟೆ ನಡೆದಿಲ್ಲ ಆರೋಪಿತರು ನಮ್ಮ ಮೇಲೆ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸರ ಮುಂದೆ 3 ಜನ ಹುಡುಗರು ಬಂದಿದ್ದರು ಎಂದು ಹೇಳಿರುತ್ತೇನೆ. ನನ್ನ ಹೇಳಿಕೆಯಲ್ಲೂ ಸಹ ನಾನು ಅದೇ ಹೇಳಿರುತ್ತೇನೆ.

ಚಾಸಾ-1 ರವರಿಗೆ ಎಡಗೈ , ಬಲಪಕ್ಕೆ ಮತ್ತು ಬಲಗಣ್ಣಿನ ಹುಬ್ಬಿಗೆ ಏಟಾಗಿತ್ತು. 3 ಜನ ಹುಡುಗರು ಹಾಗೂ 2 ನೇ ಆರೋಪಿ ಗಂಡ ಸೇರಿ ಹೊಡೆದಿರುತ್ತಾರೆ. ಯಾರು ಎಲ್ಲಿಗೆ ಹೊಡೆದಿರುತ್ತಾರೆ ನನಗೆ ಗೊತ್ತಿಲ್ಲ.  ನಾನು ಪೊಲೀಸರ ಮುಂದೆ ನೀಡಿದ ಹೇಳಿಕೆಯಲ್ಲಿ ಹೇಳಿರುವ ವಿಚಾರ ನನಗೆ ಗೊತ್ತು. ಯಾವುದೇ ಜಗಳ ಆಗಿಲ್ಲ-ಆರೋಪಿತರು ನಮ್ಮ ಮೇಲೆ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ: ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಶಿರಿನ್ ಜಾವೀದ್ ಅನ್ಸಾರಿ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.